3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.158/2021**

ಪ್ರಾಸಾ 11

ಚಾಸಾ 16

| | |
|---|---|
| ಹೆಸರು | ಗೋವಿಂದಪ್ಪ |
| ತಂದೆಯ ಹೆಸರು | ಹನುಮಂತರಾಯಪ್ಪ |
| ವಯಸ್ಸು | 38 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಚೌಳಹಳ್ಳಿ |

ಸಾಕ್ಷಿಯನ್ನು ದಿನಾಂಕ 04.03.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಈಗ ನನಗೆ ತೋರಿಸಿದ ನಿಪಿ.11 ರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ.11(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು ಐದು ವರ್ಷಗಳ ಹಿಂದೆ ಮಧುಗಿರಿಯ ಡಿವೈಎಸ್‌ಪಿರವರ ಕಚೇರಿಯಲ್ಲಿ ಮಾಡಿರುತ್ತೇನೆ. ಆಗ ನನ್ನೊಂದಿಗೆ ನಾಗಭೂಷಣರವರು ಇದ್ದರು. 1 ನೇ ಆರೋಪಿ ನನ್ನ ತಮ್ಮ. ಡಿವೈಎಸ್‌ಪಿರವರ ಕಚೇರಿಯಲ್ಲಿ ನನಗೆ ಯಾವುದೇ ಬಟ್ಟೆಗಳನ್ನು ತೋರಿಸಿರುವುದಿಲ್ಲ.ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಬಟ್ಟೆಗಳನ್ನು ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರು ಮಾಡಿದ ಪಂಚನಾಮೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ

ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

2) ನನಗೆ ಮೃತ ಸಂಜೀವರಾಯಪ್ಪರವರು ಗೊತ್ತಿಲ್ಲ. ದಿಃ19.11.2019 ರಂದು ಸಂಜೆ 5.30 ರಿಂದ 6 ಗಂಟೆ ಸಮಯದಲ್ಲಿ ಮಿಡಿಗೇಶಿ ಪೋಲೀಸ್ ಠಾಣೆಯ ಸಿಬ್ಬಂದಿ ಶ್ರೀಕಂಠಪ್ಪರವರು ಮೃತ ಸಂಜೀವರಾಯಪ್ಪರವರ ಮೃತ ದೇಹದ ಮೇಲೆ ಇದ್ದ ಬಟ್ಟೆಗಳು ಇವೇ ಎಂದು ನಮ್ಮ ಸಮಕ್ಷಮ ಹಾಜರುಪಡಿಸಿದ್ದು ಅವು ಕಪ್ಪು ಬಣ್ಣದ ತುಂಬು ತೋಳಿನ ಷರಟು, ಬಿಳಿ ಬಣ್ಣದ ಸ್ಯಾಂಡೋ ಬನಿಯನ್, ಆಕಾಶ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಆಗಿದ್ದು ಅವುಗಳನ್ನು ನಮ್ಮ ಸಮಕ್ಷಮ ವಶಕ್ಕೆ ತೆಗೆದುಕೊಂಡು ನಿಪಿ.11 ರಂತೆ ಪಂಚನಾಮೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ತಮ್ಮನಾಗಿರುವುದರಿಂದ ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ.B.K.P.S. ವಕೀಲರಿಂದ : ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ